ದಿನಾಂಕ 19/03/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀ ಸವಾಲು :- ಶ್ರೀ ಎಸ್.ಆರ್.ಆರ್. ಪ್ರತಿವಾದಿ ಪರ ವಕೀಲರಿಂದ**

ವಾದಿ ದಾವೆಯನ್ನು ಮೂರು ಆಸ್ತಿಗಳಿಗೆ ಹೂಡಿರುತ್ತಾರೆ. ಸದರಿ ಆಸ್ತಿಗಳ ಸರ್ವೆ ನಂ-16/13, 38 ಗುಂಟೆ , 16/19 , 24 ಗುಂಟೆ ಮತ್ತು ಸರ್ವೆ ನಂ- 16/28 , 3 ಗುಂಟೆ ಇರುತ್ತದೆ. ಸರ್ವೆ ನಂ-16/13 ರ ಪೂರ್ವಕ್ಕೆ -ಹಳ್ಳ , ಪಶ್ಚಿಮಕ್ಕೆ - ಭಕ್ತರಹಳ್ಳಿ ಗುಟ್ಟೆ , ಉ-ಸಿದ್ದಪ್ಪನ ಜಮೀನು ಮತ್ತು ದ-ಹಳ್ಳ ಬರುತ್ತದೆ. ಪೂರ್ವಕ್ಕೆ ಹಳ್ಳ ಆದ ನಂತರ ನರಸಮ್ಮ ರವರ ಜಮೀನು ಬರುತ್ತದೆ ಆದರೆ ಸರ್ವೆ ನಂಬರ್ ಗೊತ್ತಿರುವುದಿಲ್ಲ. ಉತ್ತರ ಸಿದ್ದಪ್ಪ ರವರ ಜಮೀನಿನ ವಿಸ್ತೀರ್ಣ 38 ಗುಂಟೆ ಇರುತ್ತದೆ. ದಕ್ಕಿಣೆ ಹಳ್ಳ ಇದ್ದು ಆದಾದ ನಂತರ ಗುಟ್ಟೆ ಇರುತ್ತದೆ. ದಾವಾ ಐಟಂ ನಂ-2 ಮತ್ತು 3 ರ ಚಕ್ಕುಬಂದಿಯ ಮಾಲೀಕರು, ಚಕ್ಕುಬಂದಿ ಮತ್ತು ವಿಸ್ತೀರ್ಣ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಅಕ್ಕ ಪಕ್ಕ ನನಗೆ ಸೇರಿದ ಜಮೀನು ಇರುವುದಿಲ್ಲ ಎಂದರೆ ಸರಿ.

2. ಹೊಂಬಣ್ಣ ಎನ್ನುವವರನ್ನು ನೋಡಿರುವುದಿಲ್ಲ ಆದರೆ ಕೇಳಿರುತ್ತೇನೆ, ಸದರಿ ಹೊಂಬಣ್ಣನ ಹೆಂಡತಿ ಮಕ್ಕಳು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳು ಲಕ್ಷ್ಮೀದೇವಮ್ಮ ರವರಿಗೆ ಸೇರಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಲಕ್ಷ್ಮೀದೇವಮ್ಮ ರವರು ಕೆಂಪಮ್ಮ ಇವರಿಗೆ ದಾನ ಮಾಡಿರುತ್ತಾರೆಂದು ಉತ್ತರಿಸಿರುತ್ತಾರೆ. ಮೊದಲಿಗೆ ಹೂಂಬಣ್ಣನ ಹೆಂಡತಿ ಲಕ್ಷ್ಮೀದೇವಮ್ಮ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಲಕ್ಷ್ಮೀದೇವಮ್ಮ ತೀರಿಕೊಂಡ ನಂತರ ಸದರಿ ಆಸ್ತಿಗಳು ಚನ್ನಪ್ಪನಿಗೆ ಬಂದಿರುತ್ತವೆ ಎಂದರೆ ಸರಿ. ಶಿವಶಂಕರ್ ರವರು ದಾವಾ ಆಸ್ತಿಗಳನ್ನು ಉಳುಮೆ ಮಾಡುತ್ತಾ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ವಾದಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಕೆಂಪಮ್ಮ ರವರು ಬೆಂಗಳೂರಿನ ಖಾಯಂ ವಾಸ ಎಂದರೆ ಸಾಕ್ಷಿ ನಮ್ಮ ಊರಿನಲ್ಲಿ ಇರುತ್ತಾರೆ ಎಂದು ಉತ್ತರಿಸಿರುತ್ತಾರೆ.

3. ಕೆಂಪಮ್ಮನ ಗಂಡ ರಾಮಣ್ಣನ ಊರು ಬಿಸಲಹಳ್ಳಿ ಮಾಗಡಿ ತಾಲ್ಲೂಕು ಎಂದರೆ ನನಗೆ ಗೊತ್ತಿರುವುದಿಲ್ಲ. ಕೆಂಪಮ್ಮ ರವರು 2015 ರಲ್ಲಿ ಚಿನಕವಜ್ರಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಕೆಂಪಮ್ಮ ರವರು ಹೊನ್ನಪ್ಪನ ಹೆಂಡತಿ ಲಕ್ಷ್ಮೀದೇವಮ್ಮ ರವರ ಜೊತೆಯಲ್ಲಿ ಇರುವುದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. 45 ವರ್ಷಗಳಿಂದ ಲಕ್ಷ್ಮೀದೇವಮ್ಮ, ಹೊನ್ನಪ್ಪ ರವರು ಒಂದೇ ಮನೆಯಲ್ಲಿರುತ್ತಾರೆ. ಸದರಿಯವರು ಪಡಿತರಚೀಟಿ ಮಾಡಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಗಳು ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ.